ಪೊಲೀಸ್ ಅಧೀಕ್ಷಕರವರ ಕಛೇರಿ. ಬೆಂಗಳೂರು ಗ್ರಾಮಾಂತರ ಜಿಲ್ಲೆ.

ದಿನಾಂಕ: 21.08.2021

# ಪತ್ರಿಕಾ ಪ್ರಕಟಣೆ

ನೆಲಮಂಗಲ ಉಪವಿಭಾಗ

## ನೆಲಮಂಗಲ ಟೌನ್ ಪೊಲೀಸ್ ಠಾಣೆ

1. ಗಾಂಜಾ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಆರೋಪಿಯ ಬಂಧನ 28000/- ರೂ ಬೆಲೆಬಾಳುವ 600 ಗ್ರಾಂ ತೂಕದ ಗಾಂಜಾ

ಮತ್ತು

2. ಎರಡು ಕಳ್ಳತನ ಪ್ರಕರಣಗಳಲ್ಲಿ 4 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಸುಮಾರು 6 ಲಕ್ಷ ರೂ ಮೌಲ್ಯದ 20 ವಿವಿಧ ಕಂಪನಿಗಳ ಟೈರುಗಳು

**"ಒಟ್ಟು 5 ಜನ ಆರೋಪಿತರುಗಳನ್ನು ಬಂಧಿಸಿ ಅವರಿಂದ 6,28,000/- ರೂಗಳನ್ನು ವಶಪಡಿಸಿಕೊಂಡಿರುವ ಬಗ್ಗೆ."**

**1. ಗಾಂಜಾ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಆರೋಪಿಯ ಬಂಧನ 28 ಸಾವಿರ ರೂ ಬೆಲೆಬಾಳುವ 600 ಗ್ರಾಂ ಗಾಂಜಾ ವಶ**

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ||ವಂಸಿ ಕೃಷ್ಣ. ಐ.ಪಿ.ಎಸ್ ಮತ್ತು ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ. ಲಕ್ಷ್ಮೀಗಣೇಶ್ ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮತ್ತು ನೆಲಮಂಗಲ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರವರಾದ ಶ್ರೀ.ಹೆಚ್.ಸಿ.ಜಗದೀಶ್ ರವರ ನೇತೃತ್ವದಲ್ಲಿ ನೆಲಮಂಗಲ ಟೌನ್ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಎ.ವಿ.ಕುಮಾರ್ ಹಾಗು ಪಿ.ಎಸ್.ಐ ರವರಾದ ಎನ್.ಸುರೇಶ್ ಹಾಗು ಸಿಬ್ಬಂದಿಯವರ ತಂಡಕ್ಕೆ ದೊರೆತ ಮಾಹಿತಿಯಂತೆ ನೆಲಮಂಗಲ ಟೌನ್ ಪೊಲೀಸ್ ಠಾಣಾ ಸರಹದ್ದಿನ ಇಂದಿರಾನಗರಕ್ಕೆ ಸೇರುವ ಸ್ಮಶಾನದ ಬಳಿ ಗಾಂಜಾವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಆರೋಪಿಯಾದ

1. **ಹರಿಗೋವಿಂದರಾಜು ಬಿನ್ ಲೇಟ್ ವೇಣುಗೋಪಾಲರಾಜು, 19 ವರ್ಷ, ಕ್ಷತ್ರಿಯ ಜನಾಂಗ, ಬೈಕ್ ಗ್ಯಾರೇಜ್‌ನಲ್ಲಿ ಕೆಲಸ, ವಾಸ ನಂ 4052, 5 ನೇ ಬ್ಲಾಕ್, ಜನಪ್ರಿಯ ಟೌನ್ ಶಿಪ್, ಕಡಬಗೆರೆ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕ್,**

ದಿನಾಂಕ 19.08.2021 ರಂದು ಭಾತ್ಮಿದಾರರರಿಂದ ಬಂದ ಖಚಿತ ಮಾಹಿತಿ ಮೇರೆಗೆ ಅಕ್ರಮವಾಗಿ ಗಾಂಜಾ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಮೇಲ್ಕಾಣಿಸಿದ ಆರೋಪಿಯನ್ನ ಕಾನೂನು ನಿಯಮಾವಳಿಗಳನ್ವಯ ದಸ್ತಗಿರಿ ಮಾಡಿ ಆತನ ವಶದಿಂದ 28,000/- ರೂ ಬೆಲೆ ಬಾಳುವ 600 ಗ್ರಾಂ ಬಾಳುವ ಗಾಂಜಾವನ್ನು ವಶಕ್ಕೆ ಠಾಣಾ ಮೊ.ನಂ 102/2021 ಕಲಂ 20(ಬಿ) ಎನ್.ಡಿ.ಪಿ.ಎಸ್. ಆಕ್ಟ್ 1985 ರೀತ್ಯಾ ಪ್ರಕರಣ ದಾಖಲಿಸಿ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿರುತ್ತಾರೆ.

**2. ಎರಡು ಕಳ್ಳತನ ಪ್ರಕರಣಗಳಲ್ಲಿ 4 ಜನ ಆರೋಪಿಗಳನ್ನು ದಸ್ತಗಿರಿ ಮಾಡಿ ಸುಮಾರು 6 ಲಕ್ಷ ರೂ ಮೌಲ್ಯದ 20 ವಿವಿಧ ಕಂಪನಿಗಳ ಟೈರುಗಳ ವಶ**

ನೆಲಮಂಗಲ ಉಪವಿಭಾಗದ ನೆಲಮಂಗಲ ಟೌನ್ ಪೊಲೀಸ್ ಠಾಣಾ ಸರಹದ್ದಿನಲ್ಲಿ ದಿನಾಂಕ 09.07.2021 ರಂದು ವಿಶ್ವೇಶ್ವರಪುರ ಗ್ರಾಮದಲ್ಲಿರುವ ಮೆ.ಅಗಸ್ತ್ಯ ಈಚರ್ ಸ್ಟಾಕ್ ಯಾರ್ಡ್‌ನಲ್ಲಿ 13 ಟೈರುಗಳು ಕಳ್ಳತನವಾಗಿದ್ದು, ಆ ಮೇರೆಗೆ ಠಾಣಾ ಮೊ.ನಂ 86/2021 ಕಲಂ 379 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ ಮತ್ತು ದಿನಾಂಕ 25.07.2021 ರಂದು ಚಿನ್ನಮಂಗಲ ಗ್ರಾಮದ ಪ್ರೇರಣಾ ಮೋಟಾರ್ಸ್ ಸ್ಟಾಕ್ ಯಾರ್ಡ್‌ನಲ್ಲಿ 13 ಟೈರುಗಳು ಕಳ್ಳತನವಾಗಿದ್ದು, ಆ ಮೇರೆಗೆ ಠಾಣಾ ಮೊ.ನಂ 88/2021 ಕಲಂ 379 ಐಪಿಸಿ ರೀತ್ಯಾ ಪ್ರಕರಣದ ದಾಖಲಾಗಿರುತ್ತದೆ.

ಮೇಲ್ಕಾಣಿಸಿದ ಪ್ರಕರಣಗಳಲ್ಲಿ ಆರೋಪಿಗಳ ಪತ್ತೆ ಹಚ್ಚುವ ಸಲುವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ॥ವಂಸಿ ಕೃಷ್ಣ, ಐ.ಪಿ.ಎಸ್ ಮತ್ತು ಅಪರ ಪೊಲೀಸ್ ಅಧೀಕ್ಷಕರವರಾದ ಶ್ರೀ. ಲಕ್ಷ್ಮೀಗಣೇಶ್ ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ಮತ್ತು ನೆಲಮಂಗಲ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರವರಾದ ಶ್ರೀ.ಹೆಚ್.ಸಿ.ಜಗದೀಶ್, ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ನೆಲಮಂಗಲ ಟೌನ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶ್ರೀ. ಎ.ವಿ.ಕುಮಾರ್, ಪಿ.ಎಸ್.ಐ ರವರಾದ ಶ್ರೀ ಎನ್.ಸುರೇಶ್ ಮತ್ತು ಸಿಬ್ಬಂದಿಯವರ ಒಂದು ತಂಡವನ್ನು ರಚನೆ ಮಾಡಿದ್ದು ಅದರಂತೆ ಕಾರ್ಯ ಪ್ರವೃತ್ತರಾದ ತಂಡವು ದಿನಾಂಕ: 18.08.2021 ರಂದು ಈ ಕೆಳಕಂಡ ಆರೋಪಿಗಳಾದ

1. ವೇಲುಮುರುಗನ್ ಬಿನ್ ತಿರುಪಾಣಂ, 35 ವರ್ಷ, ವನ್ನಿಯಾರ್ ಜನಾಂಗ, ಕಾರ್ಪೆಂಟರ್ ಕೆಲಸ, ವಾಸ: ತಿರುಂಜಿಕುಪ್ಪಂ ಗ್ರಾಮ, ವೆಳ್ಳಕೋಟ್ಟೈ ಪೋಸ್ಟ್, ವಾಣಿಯಂಬಾಡಿ ತಾಲ್ಲೂಕು, ತಿರುಪತ್ತೂರು ಜಿಲ್ಲೆ ತಮಿಳುನಾಡು ರಾಜ್ಯ.
2. ಮುತ್ತುರಾಜ್ @ ಮುತ್ತರಸು ಬಿನ್ ಸರವಣನ್, 28 ವರ್ಷ, ನಂ 177, ತುರುಂಜಿಕುಪ್ಪಂ, ವಿಲ್ಲಾಕಟ್ಟೈ ಪೋಸ್ಟ್, ವಾಣಿಯಂಬಾಡಿ ತಾಲ್ಲೂಕ್, ತಿರುಪತ್ತೂರು ಜಿಲ್ಲೆ
3. ಚೆನ್ನದೊರೈ ಬಿನ್ ಗೋವಿಂದಸ್ವಾಮಿ, 38 ವರ್ಷ, ನಂ 151, ತುರುಂಜಿಕುಪ್ಪಂ, ವೇಲಾಕುಟ್ಟೈ ಪೋಸ್ಟ್, ವಾಣಿಯಂಬಾಡಿ ತಾಲ್ಲೂಕ್, ತಿರುಪತ್ತೂರು ಜಿಲ್ಲೆ.
4. ಮಹೇಂದ್ರನ್ @ ಮಗೇಂದ್ರನ್ ಬಿನ್ ಅಣ್ಣಾಮಲೈ, 32 ವರ್ಷ, ಪಾಲಕನ್ನೂರ್, ಮೇಸಿಲಂಪಾಡಿ ಪೋಸ್ಟ್, ಚೆಂಗಾಂ ತಾಲ್ಲೂಕ್, ತಿರುವಣ್ಣಾ ಮಲೈ ಜಿಲ್ಲೆ

ರವರುಗಳನ್ನು ದಸ್ತಗಿರಿ ಮಾಡಿದ್ದು, ಆರೋಪಿತರು ತನಿಖೆ ವೇಳೆಯಲ್ಲಿ ತಪ್ಪೊಪ್ಪಿಕೊಂಡ ಮಾಹಿತಿ ಮೇರೆಗೆ ಮೇಲ್ಕಾಣಿಸಿದ ಪ್ರಕರಣಗಳಲ್ಲಿ ಸುಮಾರು 6 ಲಕ್ಷ ರೂ ಬೆಲೆ ಬಾಳುವ ವಿವಿಧ ಕಂಪನಿಯ 20 ಟೈರುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ.

**ಈ ಎಲ್ಲಾ ಯಶಸ್ವಿ ಕಾರ್ಯಾಚಾರಣೆಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ಅಧೀಕ್ಷಕರವರಾದ ಡಾ॥ ವಂಸಿ ಕೃಷ್ಣ, ಐ.ಪಿ.ಎಸ್ ಮತ್ತು ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಲಕ್ಷ್ಮೀ ಗಣೇಶ್. ಕೆ ಕೆ.ಎಸ್.ಪಿ.ಎಸ್ ರವರ ಮಾರ್ಗದರ್ಶನದಲ್ಲಿ ನೆಲಮಂಗಲ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕರವರಾದ ಶ್ರೀ ಹೆಚ್.ಸಿ.ಜಗದೀಶ್ ಕೆ.ಎಸ್.ಪಿ.ಎಸ್ ರವರ ನೇತೃತ್ವದಲ್ಲಿ ನೆಲಮಂಗಲ ಟೌನ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ರವರಾದ ಶ್ರೀ ಎ.ವಿ.ಕುಮಾರ್, ಪಿ.ಎಸ್.ಐ ರವರಾದ ಶ್ರೀ ಎನ್.ಸುರೇಶ್ ಸಿಬ್ಬಂದಿಯವರಾದ ಎಎಸ್ಐ ಗಂಗಣ್ಣ, ಹೆಚ್.ಸಿ 462 ರಘು.ಬಿ.ಎಸ್, ಹೆಚ್.ಸಿ 539 ಚನ್ನೇಗೌಡ, ಹೆಚ್.ಸಿ 558 ಕೇಶವಮೂರ್ತಿ, ಹೆಚ್ ಸಿ 275 ಶ್ರೀನಿವಾಸ್, ಹೆಚ್.ಸಿ 425 ಬಸವರಾಜು, ಪಿಸಿ 915 ಬಸವರಾಜು, ಪಿಸಿ 155 ಶಿವಕುಮಾರ್ ಪಿಸಿ 912 ಹನುಮಂತ ಹಿಪ್ಪರಗಿ, ಎ.ಹೆಚ್.ಸಿ 63 ಮಹಮದ್ ಜರೀಫ್ ರವರುಗಳು ತಂಡವು 5 ಜನ ಆರೋಪಿಗಳನ್ನು ಬಂಧಿಸಿ, ಮೇಲ್ಕಾಣಿಸಿದ 3 ಪ್ರಕರಣಗಳಲ್ಲಿ 28 ಸಾವಿರ ರೂ ಬೆಲೆ ಬಾಳುವ 600 ಗ್ರಾಂ ಗಾಂಜಾವನ್ನು ಹಾಗು 6 ಲಕ್ಷ ರೂ ಬೆಲೆ ಬಾಳುವ ವಿವಿಧ ಕಂಪನಿಗಳ ಒಟ್ಟು 20 ಟೈರುಗಳನ್ನು ಅಮಾನತ್ತುಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಮಾನ್ಯ ಡಾ॥ ವಂಸಿ ಕೃಷ್ಣ, ಐ.ಪಿ.ಎಸ್. ಪೊಲೀಸ್ ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಕಾರ್ಯಾಚರಣೆಯಲ್ಲಿ ಯಶಸ್ವಿಯಾದ ಅಧಿಕಾರಿ & ಸಿಬ್ಬಂದಿ ವರ್ಗದವರಿಗೆ ಶ್ಲಾಘನೆ ವ್ಯಕ್ತಪಡಿಸಿರುತ್ತಾರೆ.**

**(ಡಾ॥ ವಂಶಿ ಕೃಷ್ಣ, ಐ.ಪಿ.ಎಸ್)**
**ಪೊಲೀಸ್ ಅಧೀಕ್ಷಕರು**
**ಬೆಂಗಳೂರು ಗ್ರಾಮಾಂತರ ಜಿಲ್ಲೆ.**